ಬಂದು ಕೋಣೆ ಬಾಗ್ಲಾಕ್ಯಂಡು ಪ್ರಸೂತಿ ಮಾಡತೊಡಗಿದಳು. ಆ ಹೆಂಗ್ಸು ಗಂಗಮ್ಮ ಚೊಚ್ಚಲ ಹೆರಿಗೆ ನೋವು ತಾಳಲಾರ್ದೆ ಆಕಾಶ ಭೂಮಿ ಒಂದೆ ಮಾಡಿತ್ತು. ಬಾಯಿ ಮ್ಯಾಕೊಡೆದ ಯಲ್ಲವ್ವ 'ಮುಚ್ಚೆ ಬಾಯ, ಆ ನನ್ನಪ್ಪ ಟಿಪ್ಪು ಸುಲ್ತಾನಪ್ಪುಗೆ ಬಂದ ಕಷ್ಟೇನಾರ ನಿಂಗೆ ಬಂದೈತೇನೆ' ಅಂದ್ಲು. ಆ ನೋವಿನಲ್ಲೂ ಅತ್ತ ಗಮನ ಹರಿಸಲಾಗಿ 'ಅರ್ಧ ರಾಜ್ಯವ ಕೊಟ್ಟು, ಮಕ್ಕಳನು ಒತ್ತೆ ಇಟ್ಟು, ಹುಲಿಯೆಂದರೆ ಹುಲಿಯಣ್ಣ, ಮೈಸೂರಿನ ಹುಲಿಯಣ್ಣ. ಶಪತದ ಹುಲಿಯಣ್ಣ' ಎಂದು ಸಂಕಟ ತುಂಬಿದ ವೀರಾವೇಶದಿಂದ ಮಾರ್ದನಿಸುತ್ತಿತ್ತು. ಗಂಗಮ್ಮಳ ನರಳಾಟ ನಿಧಾನವಾಗಿ, ಕೆಂಪಗೆ ಗುಂಡುಕಲ್ಲಿನಂತ ಗಂಡುಮಗು ಜನಿಸಿದ್ದೂ ಮೈಮರೆಯುವಷ್ಟು ಟಿಪ್ಪುವಿನ ಕತೆ ಕಣ್ಣೀರು ತರಿಸಿತ್ತಂತೆ! ಜನ ಎಲ್ಲ ಕತೆ ಮುಗಿಸಿಕೊಂಡು ಮನೆದಾರಿ ಹಿಡಿದಿದ್ದರು. ಅಲ್ಲೆ ನಿಂತಿದ್ದ ದುರ್ಗಯ್ಯ ಗಂಡೊ ಹೆಣ್ಣೊ ಕೇಳಿ ಗಂಡು ಎಂದದ್ದೆ ತಡ ಅಲ್ಲೆ ಅದೆ ಲಾವ್ಣಿರ ಕೈಲೆ ಕತ್ತೆ ಹಾಲ ಬಿಡ್ಸಿ ಟಿಪ್ಪು ಎಂದು ನಾಮಕರಣ ಮಾಡ್ಸಿದ್ದ.

ಮಗ ಬಾಣ್ತಿ ನೋಡಕೆ ಬಂದ ಹಟ್ಟಿಗರೆಲ್ಲ ಆ ನನ್ನಪ್ಪ ಟಿಪ್ಪು ಸುಲ್ತಾನ್‌ನಂಗೇ ಐತೆ ಎಂದು ನಟಿಗೆ ಮುರ್ದು ಹೋಗಿದ್ರು. ಅಷ್ಟರ ಮಟ್ಟಿಗೆ ಇನ್ನೂರೈವತ್ತು ವರ್ಷ ಹಿಂದಿನ ಟಿಪ್ಪುನ ಹಟ್ಟಿಗೆ ತಂದು ಜೀವ ತುಂಬಿದ್ರು ಲಾವ್ಣೆರು. ಅದರ ಅಜ್ಜಿ ನಂಜವ್ವಗೆ ಮಾತ್ರ ತನ್ನ ಮನೆ ಪುರುಷ ನಾಯ್ಕನ ಹಟ್ಟಿ ತಿಪ್ಪೆಸ್ವಾಮಿ ನೆನಪಲ್ಲಿ 'ತಿಪ್ಪಯ್ಯ' ಅಂತ ಹೆಸರಿಡಬೇಕು ಎಂಬ ಆಸೆ ಈಡೇರಿದಂತೆ ಕಾಣಲಿಲ್ಲ. ಅದುಕ್ಕೆ ಏನೊ ಅವಜ್ಜಿ ಮಾತ್ರ ಟಿಪ್ಪು ಅನ್ನದ್ದ ತಿಪ್ಪು, ತಿಪ್ಪು ಅಂತ ಕರಿಯದು. ಅದೂ ಸಹ ಊರಿನ ಅನೇಕರಿಗೆ ಇಷ್ಟ ಆದಂತಾಗಿ 'ತಿಪ್ಪ' ಅಂತನೂ ಕರಿಯರು. ಇಲ್ಲೆ ಊರ ಇನ್ನೊಂದ್ ವಿಶೇಷ ಅಂದ್ರೆ ಹುಟ್ಟ ಮಕ್ಳು ತಮ್ಮ ಅಪ್ಪ ಅಮ್ಮಂದಿರಾಡ ಉರ್ದುನು ಕನ್ನಡನು ಒಟ್ಟಿಗೆ ಕಲಿತವೆ. ಬೀದಿಲಿ ಚಿಣ್ಣಿದಾಂಡು, ಗೋಲಿ ಗಜ್ಗ ಆಡ್ಕೆಂಡು ಟಿಪ್ಪು ಇತ್ತ ಸಾಬ್ರು ಮನೆಲು ಹಿಂದು ಮನೆಲು ಕೂಡೆ ಬೆಳೆದ.

ಟಿಪ್ಪುಗೆ ಐದೊರ್ಷ ತುಂಬಿ ಇನ್ನೇನು ಇಸ್ಕೂಲಿಗೆ ಸೇರ್ಬೇಕು ಅನ್ನೊಷ್ಟ್ರಲ್ಲಿ ಅವರವ್ವ ಗಂಗಮ್ಮ ಮತ್ತೊಂದುಕ್ಕೆ ನೀರುಯ್ಯುಂಡ್ಳು. ತವ್ರಿಂದ ಬಂದ ನಂಜವ್ವ 'ಬಸಿರೆಂಗ್ಸು, ಈ ಉಡ್ಗ ತಿಪ್ಪಯ್ಯ ಬೇರೆ ತುಂಟ, ಹಿಂದಿಂದೆ ಓಡಾಡಕಾಗಲ್ಲ, ಅಲ್ಲೆ ನಮ್ಮೂರಲ್ಲೆ ಇಸ್ಕೂಲಿಗೆ ಸೇರಿಸ್ಕಂತಿನಿ ಕಳ್ಸಪ್ಪ' ಅಂತ ಅಳಿಯ ದುರ್ಗಯ್ಯಂತ ಬೇಡಿಕೆ ಇಟ್ಟಳು. ಅತ್ತೆ ಬಂದು ಇಲ್ಲೆ ಇದ್ದು ನಮ್ಮ ಕಷ್ಟಕ್ಕೆ ಆಕ್ತಳೆ ಎಂದು ಭಾವಿಸಿದ್ದ ಅಳಿಯ ಕೊನಿಗತ್ತಗೆ ಮಗ ಟಿಪ್ಪುನೆ ಇದೊಂದ್ ವರ್ಷದ ಮಟ್ಟಿಗೆ ನೆಂಟ್ರ ಮನಿಗೆ ಕಳ್ಸಕೆ ಒಪ್ಕೆಂಡ. ನೀನು ಮಗ ಕರ್ಕಂಡು ಹಿರಿಯೂರಿಗೋಗಿರು ನಾಳಿಕ ನಾಡ್ದ ಸ್ಕೂಲಿಗೆ ಸೇರ್ಸಕೆ ನಾನು ಬತ್ತಿನಿ ಅಂತ ನಂಜಯ್ಯ ಬೀಳ್ಕೊಟ್ಟ.

ಹಿರಿಯೂರು ಪಕ್ಕದ ಕೋಟೆ ಕೆಳಗಿನ ಮಾದಾಪುರ ಕರಿಯವ್ವನ ಊರು. ಅಲ್ಲಿ ಸುಮಾರು ನಾನೂರು ಮನೆ ಉತ್ತುಮರವು. ಕರಿಯವ್ವನ ಗಂಡ ತಿಮ್ಮಯ್ಯ ಮತ್ತವರ ಅಣ್ಣತಮ್ಮತನದ ಮೂರು ಮನೆ ಕುಲ್ವಾಡ್ಕೆವ ಬಿಟ್ರೆ ಉಳಿದೆಲ್ಲ ಒಂದೆ ಜಾತಿ. ಕರಿಯವ್ವ ಮಗ ಕರ್ಕಂಡೋಗಿ ಮೂರು ದಿನ ಆದ್ರು ಸ್ಕೂಲಿಗೆ ಸೇರ್ಸಕೆ ಬತ್ತಿನಿ ಅಂತ ಹೇಳಿದ್ದ ಅಳಿಮಯ್ಯ ಬರ್ಲೆ ಇಲ್ಲ ಅಂತ ಫೋನ್ ಮಾಡವ್ನೊತ್ತಿಗೆ. 'ಹುಣುಸೆ ಹಣ್ಣಿನ ವ್ಯಾಪಾರುಕ್ಕೆ ಅಂತ ತನ್ನ ಹಟ್ಟಿ ಸಾಬ್ರುಜೊತೆ ದೂರ ಬಂದುಬಿಟ್ಟಿದಿನಿ ನೀವೆ ಒಂದ್ ಹೆಜ್ಜೆ ಕರ್ಕಂಡೋಗಿ ಸೇರಿಸಿ ಬರ್ರಿ' ಅಂದ. ಅದೇ ಮಾತಿನಂತೆ ನಂಜವ್ವ ಹಿರಿಯೂರಿಂದ ಬರುವಾಗ ಕೊಡಿಸ್ಕೆಂಡು ಬಂದಿದ್ದ ಸ್ಲೇಟ್‌ನ ಮೊಮ್ಮಗನ ಕೈಲಿಡಿಸ್ಕೆಂಡು ಇಸ್ಕೂಲ್ತಕೆ ಕರ್ಕಂಡು ಬಂದ್ಲು. ಅದು ಪೂರ್ವದಲ್ಲಿ ಒಳ್ಳೆ ಹೆಸರಿದ್ದ ಸರ್ಕಾರಿ ಸ್ಕೂಲು. ಈಗೆಲ್ಲ ರೆಂಬೆ ಕೊಂಬೆ ಉದುರಿ ಗೆದ್ದಲು ತಿಂದು ಬುಡುಕ್ಕೆ ಬಂದೈತೆ. ಅಲ್ಲಿದ್ದ ಹೆಡ್ ಮಾಷ್ಟ್ರು ನಂಜವ್ವನ ಕೈಲಿದ್ದ ಬರ್ತ್ ಸರ್ಟಿಫಿಕೇಟ್ ಇಸ್ಕಂಡು ಹುಟ್ಟಿ ಹುಟ್ಟಿದ ತಾರೀಖು, ಅಪ್ಪಂದು ಅವ್ವಂದು